### ಪತ್ನಿಯ ರಕ್ಷಿಸಲಾಗದ ಜನಸೇವಕ

ಕಲರ್ಸ್ ಕನ್ನಡದ 'ಕೆಂಡಸಂಪಿಗೆ' ಧಾರಾವಾಹಿ ಚೆನ್ನಾಗಿ ಮೂಡಿಬರುತ್ತಿತ್ತು. ಬರಬರುತ್ತಾ ಅದು ಲಯ ಕಳೆದುಕೊಳ್ಳುತ್ತಿದೆ. ಅದರಲ್ಲಿ ಕಾರ್ಪೊರೇಟರ್ ತೀರ್ಥ, ಸಾರ್ವಜನಿಕರ ಸಮ್ಮುಖದಲ್ಲಿ ಆದರ್ಶ ವ್ಯಕ್ತಿ ಎಂದು ಬಿಂಬಿಸಿಕೊಳ್ಳಲು ಸುಮನಾ ಎಂಬ ಬಡ ಹುಡುಗಿಯನ್ನು ಮದುವೆ ಮಾಡಿಕೊಳ್ಳುತ್ತಾನೆ. ಆತನ ಮನೆಯಲ್ಲಿ ತನ್ನ ಪತ್ನಿಯ ಮೇಲೆ ತಂದೆ, ತಂಗಿ, ಅತ್ತಿಗೆ ತಮ್ಮನಿಂದ ಆಗುತ್ತಿರುವ ಹಿಂಸೆಯನ್ನು ತಡೆಯಲು ಅವನಿಗೆ ಆಗುವುದಿಲ್ಲ. ತಾನು ಶಾಸಕ ಆಗಬೇಕು ಎನ್ನುವ ಮಹತ್ವಾಕಾಂಕ್ಷೆ ಇಟ್ಟುಕೊಂಡು ಹೀಗೆ ನಾಟಕವಾಡುವುದು ಹಾಸ್ಯಾಸ್ಪದ. ಹೆಂಡತಿಯ ಮೇಲಿನ ದೌರ್ಜನ್ಯವನ್ನು ತಡೆಯಲು ಆಗದವನು ಶಾಸಕನಾಗಿ ಜನಸೇವೆ ಹೇಗೆ ಮಾಡುತ್ತಾನೋ?

—ಬಿ. ಚಾಮರಾಜ ಅರಸ್, ಮೈಸೂರು

### 'ಕನ್ನಡತಿ'ಯ ಅಸಹಜ 'ಸಂಸ್ಕಾರ'

ಕಲರ್ಸ್‌ನ 'ಕನ್ನಡತಿ' ಧಾರಾವಾಹಿ ಅಸಹಜವಾಗಿ ಬರುತ್ತಿದೆ. ಈಚೆಗೆ ರತ್ನಮಾಲಾ ನಿಧನರಾದರು. ಅವರ ಅಂತ್ಯಸಂಸ್ಕಾರದ ದೃಶ್ಯಗಳನ್ನು ಸಾಂಕೇತಿಕವಾಗಿ ತೋರಿಸಿದ್ದರೂ ಉದ್ದೇಶವನ್ನು ವೀಕ್ಷಕರಿಗೆ ದಾಟಿಸಬಹುದಿತ್ತು. ಶವದ ಸ್ನಾನ, ಮಡಕೆ ಒಡೆಯುವುದು, ಶವಕ್ಕೆ ಶೃಂಗಾರ – ಇವೆಲ್ಲ ಬೇಡವಾದ ದೃಶ್ಯಗಳು.

—ವಿ. ಸುರೇಶ್, ಹುಬ್ಬಳ್ಳಿ

### ಶರವೇಗದಿ ಚಲಿಸುತ್ತಿದೆ ಮಾಯಾಮೃಗವೆಲ್ಲಿ...

ಸಿರಿಗನ್ನಡ ವಾಹಿನಿಯಲ್ಲಿ ಟಿ.ಎನ್. ಸೀತಾರಾಮ್, ಪಿ. ಶೇಷಾದ್ರಿ, ನಾಗೇಂದ್ರ ಶಾ ನಿರ್ದೇಶನದಲ್ಲಿ 'ಮತ್ತೆ ಮಾಯಾಮೃಗ' ಪ್ರಸಾರವಾಗುತ್ತಿದೆ. ಇದು ನಮ್ಮಂತಹವರಿಗೆ ಸಂತೋಷ ಉಂಟುಮಾಡಿದೆ. ಧಾರಾವಾಹಿ ಆರಂಭದಿಂದಲೇ 'ಮುಂದುವರೆದ ಕಥೆ' ಎಂಬುದಕ್ಕೆ ಲಿಂಕ್‌ಗಳನ್ನು ನೀಡುತ್ತಾ ಬಂದಿರುವುದು ಮೆಚ್ಚತಕ್ಕದ್ದು. ಆದರೆ, ಈ ಹೊಸ ಧಾರಾವಾಹಿಯ ಶೀರ್ಷಿಕೆ ಗೀತೆ ಕೇಳಲು ಕೊಂಚ ಇರುಸುಮುರುಸಾಗುತ್ತಿದೆ. ಹಳೆಯ ಗೀತೆಯನ್ನೇ ಇಲ್ಲೂ ಬಳಸಿಕೊಂಡರೆ ಮುಂದುವರೆದ ಭಾಗ ಎಂಬುದಕ್ಕೆ ಮತ್ತಷ್ಟು ಒತ್ತು ದೊರೆಯುತ್ತದೆ.

—ಪತ್ತಂಗಿ ಎಸ್. ಮುರಳಿ, ಬೆಂಗಳೂರು

ವಾರದ ಪತ್ರ

### ಗ್ರಹಣ: ವೈಜ್ಞಾನಿಕ ವಿಶ್ಲೇಷಣೆ ಅಗತ್ಯ

ನಾನು ದೂರವಾಣಿ ನಗರದ ಶಾಲೆಯೊಂದರಲ್ಲಿ 9ನೇ ತರಗತಿ ಓದುತ್ತಿದ್ದೇನೆ. ಗ್ರಹಣದ ಬಗ್ಗೆ ವೈಜ್ಞಾನಿಕ ಕಾರಣಗಳನ್ನು ನಾವು ಓದಿದ್ದೇವೆ. ನಮ್ಮ ದೇಶದಲ್ಲಿ ಗ್ರಹಣ ಕಾಣಿಸಿಕೊಂಡರೆ ಟೀವಿಗಳಲ್ಲಿ ಜ್ಯೋತಿಷ್ಯಶಾಸ್ತ್ರದ ಹಿನ್ನೆಲೆಯಲ್ಲಿ 'ಗ್ರಹಣ ಗ್ರಹಚಾರ' ಎಂದು ಜನರಲ್ಲಿ ಭೀತಿಯನ್ನು ಹುಟ್ಟಿಸುತ್ತಾರೆ. ಕೆಲವು ಪೋಷಕರು ಜ್ಯೋತಿಷ್ಯ ಶಾಸ್ತ್ರವನ್ನು ನಂಬಿ ತಮ್ಮ ಮಕ್ಕಳಿಗೆ ಮೌಢ್ಯವನ್ನು ತುಂಬುತ್ತಾರೆ. ಇದರಿಂದ ಜನ ಮತ್ತಷ್ಟು ಮೂಢನಂಬಿಕೆಗೆ ಬಲಿಯಾಗುತ್ತಾರೆ. ಈ ಹಿನ್ನೆಲೆಯಲ್ಲಿ ಗ್ರಹಣಗಳ ಸಂದರ್ಭದಲ್ಲಿ ವಿಜ್ಞಾನಿಗಳನ್ನೇ ಕರೆಸಿ ಟೀವಿಗಳಲ್ಲಿ ಸಂವಾದ–ಚರ್ಚೆ ಮಾಡುವುದು ಸೂಕ್ತ. ಇದರಿಂದಾಗಿ, ಮಕ್ಕಳಲ್ಲಿ ಖಗೋಳ ವಿಜ್ಞಾನ ಅಧ್ಯಯನಕ್ಕೆ ಪ್ರೇರಣೆ ಹುಟ್ಟಬಹುದು. ವಿಜ್ಞಾನದ ವಿಶೇಷ ಆವಿಷ್ಕಾರದ ಟೀವಿ ಮೌಢ್ಯವನ್ನು ಬಿತ್ತುವ ಮೂಲಕ 'ಮೂರ್ಖರ ಪೆಟ್ಟಿಗೆ' ಆಗಬಾರದು. ವಿಜ್ಞಾನ–ವೈಚಾರಿಕ ನಿಲುವನ್ನು ಪ್ರಕಟಿಸಿ ಟೀವಿ 'ಜಾಣರ ಪೆಟ್ಟಿಗೆ' ಆಗಲಿ.

—ಎಂ.ಎಸ್. ಇಂಚರಾ ದತ್, ಬೆಂಗಳೂರು




### ಹೆಲ್ಮೆಟ್ ವಿನಾಯಿತಿ

ನಮ್ಮ ಯುವಕರು ಸಿನಿಮಾ ನಟರನ್ನು, ಧಾರಾವಾಹಿಗಳ ನಾಯಕರನ್ನು ಅನುಕರಿಸುತ್ತಾರೆ. ಹಾಗಾಗಿ ಅವರ ನಡತೆ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವಂತಿರಬೇಕು.

ಕಲರ್ಸ್ ಕನ್ನಡ ವಾಹಿನಿಯ 'ಲಕ್ಷಣ' ಧಾರಾವಾಹಿಯಲ್ಲಿ ನಕ್ಷತ್ರಳನ್ನು ಹಿಂದೆ ಕೂಡಿಸಿಕೊಂಡು ಬೈಕ್ ಚಲಾಯಿಸುವ ಭೂಪತಿ ಹೆಲ್ಮೆಟ್ ಧರಿಸಿರುವುದಿಲ್ಲ. ಅದೇ ರಸ್ತೆಯಲ್ಲಿ ಸಾಗುವ ಬೈಕ್ ಚಾಲಕರು ಹೆಲ್ಮೆಟ್ ಧರಿಸಿರುತ್ತಾರೆ. ಆದರೆ, ತೆರೆಯ ಮೇಲೆ 'ಹೆಲ್ಮೆಟ್ ರಹಿತ ಚಾಲನೆ ಅಪಾಯಕಾರಿ...' ಎಂಬ ಸಾಲು ಮಾತ್ರ ಓಡುತ್ತಿರುತ್ತದೆ. ಅದರ ಬದಲು ಭೂಪತಿಯೇ ಹೆಲ್ಮೆಟ್ ಧರಿಸಿದ್ದರೆ ತೊಂದರೆ ಏನಿತ್ತು? ಬೆಲ್ಟ್ ಧರಿಸದೆ ಕಾರು ಚಲಾಯಿಸುವುದು, ಹೆಲ್ಮೆಟ್ ಧರಿಸದೇ ಬೈಕ್ ಚಲಾಯಿಸುವುದು ಕಾನೂನು ಉಲ್ಲಂಘಿಸಿದಂತೆ.

—ಮುರಲೀಧರ ಕುಲಕರ್ಣಿ, ಬೀದರ

### ಉಳಿಕೆ ಗಳಿಕೆಗಿಲ್ಲಿ ಇರಲಿ ಜಾಗ

ಹಣಕಾಸಿನ ವ್ಯವಹಾರವು ನಮ್ಮ ದೈನಂದಿನ ಜೀವನದ ಅತ್ಯಮೂಲ್ಯ ಭಾಗ. ಇಂಗ್ಲಿಷ್, ಹಿಂದಿಯಲ್ಲಿ ದಿನವಿಡೀ ಬಿತ್ತರಗೊಳ್ಳುವ ಬಿಸಿನೆಸ್ ವಾಹಿನಿಗಳಂತೆ ಕನ್ನಡದಲ್ಲಿ ಒಂದೇ ಒಂದು ಚಾನಲ್ ಇಲ್ಲ. ಧಾರಾವಾಹಿಗಳಿಗೆ, ಧಾರ್ಮಿಕ ಕಾರ್ಯಕ್ರಮಗಳಿಗೆ, ಚಲನಚಿತ್ರಗಳಿಗೆ ಮತ್ತು ವಾರ್ತೆಗಳಿಗೆ ಪ್ರತ್ಯೇಕ ವಾಹಿನಿ ಇರುವಂತೆ ಆರ್ಥಿಕತೆಗೂ ಒಂದು ವಾಹಿನಿ ಬೇಕು. ಕಡೇ ಪಕ್ಷ ದಿನಕ್ಕೆ ಒಂದೆರಡು ಗಂಟೆಯಾದರೂ ಕಾರ್ಯಕ್ರಮ ಬೇಕು. ಆ ವಾಹಿನಿಯಲ್ಲಿ ಬ್ಯಾಂಕ್ ವ್ಯವಹಾರ, ಹಣ ಉಳಿತಾಯ, ಸಾಲ, ಠೇವಣಿ, ಬಡ್ಡಿ ಲೆಕ್ಕಾಚಾರ, ಷೇರು ವ್ಯವಹಾರ... ವಿಷಯಗಳ ಬಗ್ಗೆ ಕನ್ನಡದಲ್ಲಿ ತಿಳಿಸಿದರೆ ಚೆನ್ನಾಗಿರುತ್ತದೆ.

—ಬಿ.ಎನ್. ಭರತ್, ಬೆಂಗಳೂರು

### ಹವ್ಯಾಸಕ್ಕೂ ವೇದಿಕೆಯಾಗಲಿ

ಚಂದನದಲ್ಲಿ 'ಥಟ್ ಅಂತ ಹೇಳಿ' ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಸ್ಪರ್ಧಿಗಳು ತಮ್ಮ ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ಕೆಲವರು ಅವರ ವಿಶಿಷ್ಟ ಹವ್ಯಾಸಗಳ ಬಗ್ಗೆ ತಿಳಿಸುತ್ತಾರೆ. ಉದಾಹರಣೆಗೆ, ಒಬ್ಬ ಸ್ಪರ್ಧಿ ಪ್ರಾಣಿ ಪಕ್ಷಿಗಳ ಧ್ವನಿ ಅನುಕರಣೆ ಮಾಡುವುದಾಗಿ ತಿಳಿಸಿದರು. ಅಂತಹ ಸ್ಪರ್ಧಿಗಳಿಗೆ ಸ್ವಲ್ಪ ಅವಕಾಶ ಮಾಡಿಕೊಟ್ಟರೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಭಿನ್ನ ಅಭಿರುಚಿ, ಹವ್ಯಾಸಕ್ಕೆ ವೇದಿಕೆ ನೀಡುವುದು ಅರ್ಥಪೂರ್ಣ ಆಗಬಲ್ಲದು.

—ಬಿ.ಕೆ. ಅನ್ನಪೂರ್ಣ ದೇವಿ, ಕ್ಯಾತ್ಸಂದ್ರ

### ಭ್ರಷ್ಟಾಚಾರ ಬಯಲು, ಗಟ್ಟಿ ಸಂಭಾಷಣೆ

ಸಿರಿ ಕನ್ನಡದ 'ಯುಗಾಂತರ' ಚೆನ್ನಾಗಿದೆ. ಆಡಳಿತ ಮತ್ತು ರಾಜಕಾರಣದ ಭ್ರಷ್ಟಾಚಾರವನ್ನು ಸ್ಪಷ್ಟವಾಗಿ ಎತ್ತಿ ತೋರಿದ್ದಾರೆ. ಒಂದೊಂದು ಮಾತೂ ಅರ್ಥಗರ್ಭಿತ. ಎಲ್ಲ ಪಾತ್ರಧಾರಿಗಳ ಅಭಿನಯ ಮೆಚ್ಚುವಂಥದ್ದು. ಐಎಎಸ್ ಅಧಿಕಾರಿ ಅರುಂಧತಿ ಪಾತ್ರವಂತೂ ನೈಜವಾಗಿದೆ. ಆಕೆಯ ತಂಗಿ, ತಮ್ಮರ ಮದುವೆ ನಂತರ ಹೇಗಿರಬಹುದು ಎಂಬ ಕುತೂಹಲವನ್ನು ಕೆರಳಿಸಿದೆ.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ